ಸುದ್ದಿ ಮಿಂಚು

ಮಾಜಿ ಸಿಎಂ ಹಾಗೂ ಹಾವೇರಿ-ಗದಗ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಸವರಾಜ ಬೊಮ್ಮಾಯಿ ಅವರ ತಂದೆ ದಿ. ಎಸ್.ಆರ್. ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದಾಗ ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ಹೊಸಳ್ಳಿ ಗ್ರಾಮಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಿದ್ದನ್ನು ಚುನಾವಣೆ ಪ್ರಚಾರಕ್ಕೆ ತೆರಳಿದ ಬಸವರಾಜ ಬೊಮ್ಮಾಯಿ ಅವರಿಗೆ ಗ್ರಾಮದ ಹಿರಿಯರಾದ ಭೀಮಪ್ಪ ಪಾಟೀಲರು, ಹಿರಿಯರು ನೆನೆಪಿಸಿ ಅಭ್ಯರ್ಥಿ ಬೊಮ್ಮಾಯಿ ಅವರಿಗೆ ಜೈಕಾರ ಹಾಕಿದರು.

ನೇಹಾ ಕೊಲೆ ಖಂಡಿಸಿ
ಇಂದು ನರಗುಂದ ಬಂದ್

ನರಗುಂದ: ಇತ್ತೀಚೆಗೆ ಹುಬ್ಬಳ್ಳಿಯ ಬಿವಿಬಿ ಕಾಲೇಜು ಆವರಣದಲ್ಲಿಯೇ ವಿದ್ಯಾರ್ಥಿ ನೇಹಾ ಹಿರೇಮಠ ಹತ್ಯೆ ಮಾಡಿದ ಆರೋಪಿಗೆ ಗಲ್ಲು ಶಿಕ್ಷೆ ವಿಧಿಸಬೇಕೆಂದು ಏ.25ರಂದು ತಾಲೂಕಿನ ಮಠಾಧೀಶರ ಸಾನ್ನಿಧ್ಯದಲ್ಲಿ ಸರ್ವ ಧರ್ಮದ ಸಮಾಜದ ಪ್ರಮುಖರ ಉಪಸ್ಥಿತಿಯಲ್ಲಿ ನರಗುಂದ ಬಂದ್‌ಗೆ ಕರೆ ನೀಡಲಾಗಿದೆ.

ನರಗುಂದ ವೀರ ಬಾಬಾಸಾಹೇಬರ ಅರಮನೆಯ ಆವರಣದಿಂದ ಮುಂಜಾನೆ 10:30ಕ್ಕೆ ಬೃಹತ್ ಪ್ರತಿಭಟನಾ ರ‍್ಯಾಲಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಹಾಯ್ದು ಬಸ್ ನಿಲ್ದಾಣ ಎದುರಿನ ಶಿವಾಜಿ ವೃತ್ತದಲ್ಲಿ ವಿದ್ಯಾರ್ಥಿ ಹತ್ಯೆ ಖಂಡಿಸಿ ಆರೋಪಿ ಫಯಾಜ್‌ನಿಗೆ ಗಲ್ಲು ಶಿಕ್ಷೆ ವಿಧಿಸಬೇಕು ಎಂದು ಆಗ್ರಹಿಸಲಾಗುವದು. ಸ್ಥಳೀಯ ವ್ಯಾಪಾರಿಗಳು ವಿವಿಧ ಸಂಘಟನೆಯ ಕಾರ್ಯಕರ್ತರು ಬಂದ್‌ಗೆ ಬೆಂಬಲಿಸಬೇಕು ಎಂದು ಮನವಿ ಮಾಡಲಾಗಿದೆ.

ಬಾಗಲಕೋಟೆ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಂಯುಕ್ತಾ ಪ್ರಚಾರ | ಶಾಸಕರಾದ ಕಾಶಪ್ಪನವರ, ಚಿಮ್ಮನಕಟ್ಟಿ, ಮುಖಂಡರಿಂದ ಮತಯಾಚನೆ

ಜನಪರ ಆಡಳಿತಕ್ಕೆ ಕಾಂಗ್ರೆಸ್‌ಗೆ ಮತ ನೀಡಿ ಬೆಂಬಲಿಸಿ

ಬಾದಾಮಿ: ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವು ಕಳೆದೆರಡು ಚುನಾವಣೆಗಳಲ್ಲಿ ತನ್ನ ಪ್ರಣಾಳಿಕೆಯಲ್ಲಿ ಘೋಷಿಸಿರುವ ಎಲ್ಲ ಭರವಸೆಗಳನ್ನು ಈಡೇರಿಸಿ ಜನರಿಗೆ ತನ್ನ ಜನಪರ ಕಾಳಜಿ ತೋರಿಸಿದೆ. ಹೀಗಾಗಿ ಈ ಬಾರಿ ನಡೆಯಲಿರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿರುವ ನನಗೆ ಅತ್ಯಧಿಕ ಮತ ನೀಡಿ ಗೆಲ್ಲಿಸಬೇಕೆಂದು ಅಭ್ಯರ್ಥಿ ಸಂಯುಕ್ತಾ ಪಾಟೀಲ ಮನವಿ ಮಾಡಿದರು.

ಲೋಕಸಭಾ ಚುನಾವಣಾ ಪ್ರಚಾರಾರ್ಥ ಬಾದಾಮಿ ವಿಧಾನಸಭಾ ಮತಕ್ಷೇತ್ರದ ಗುಳೇದಗುಡ್ಡ ಭಾಗದ ಕಟಗೇರಿ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಕಟಗೇರಿ ಗ್ರಾಮದ ಸಭೆಯಲ್ಲಿ ಮಾತನಾಡಿದ ಸಂಯುಕ್ತಾ ಬಿಜೆಪಿ ಕೇವಲ ಭಾವನಾತ್ಮಕ ವಿಷಯಗಳಿಗೆ ಆದ್ಯತೆ ನೀಡಿ ಜನರನ್ನು ದಾರಿ ತಪ್ಪಿಸುತ್ತಿದೆ. ಬಿಜೆಪಿ ಕೋಮುವಾದಿ ನಿಲುವಿನ ಮೇಲೆ ಚುನಾವಣೆ ಎದುರಿಸುತ್ತ ಬಂದಿದೆ. ನಮ್ಮ ಕಾಂಗ್ರೆಸ್ ಪಕ್ಷವು ಜನರ ಹಿತ ಗಮನದಲ್ಲಿ ಇಟ್ಟುಕೊಂಡು ಪ್ರಣಾಳಿಕೆ ಸಿದ್ಧಪಡಿಸಿ ಜನರ ಮನೆ ಬಾಗಿಲಿಗೆ ಗ್ಯಾರಂಟಿ ಮೂಲಕ ತಲುಪಿಸುವ ಕಾರ್ಯ ಮಾಡುತ್ತಿದೆ ಎಂದರು.

ಶಾಸಕ ಭೀಮಸೇನ ಚಿಮ್ಮನಕಟ್ಟಿ ಮಾತನಾಡಿ, ಸಿದ್ದರಾಮಯ್ಯನವರು ಬಾದಾಮಿ ಮತಕ್ಷೇತ್ರದ ಶಾಸಕರಾಗಿದ್ದಾಗ ಸಾವಿರಾರು ಕೋಟಿ ರೂ. ಅನುದಾನ ತಂದಿದ್ದರು, ಮತ್ತೇ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡುವ ಭರವಸೆ ನೀಡಿದ್ದಾರೆ. ಕ್ಷೇತ್ರದ ಅಭಿವೃದ್ಧಿಗಾಗಿ ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತಿದೆ. ಇದಕ್ಕೆ ಪೂರಕವಾಗಿ ಈ ಬಾರಿ ಕಾಂಗ್ರೆಸ್ಸಿಗೆ ಮತ ನೀಡುವ ಮೂಲಕ ಅಭ್ಯರ್ಥಿ ಸಂಯುಕ್ತಾ ಪಾಟೀಲ ಅವರನ್ನು ಗೆಲ್ಲಿಸಿ ಅಭಿವೃದ್ಧಿಗೆ ಮುನ್ನುಡಿ ಬರೆಯಿರಿ ಎಂದು ಅವರು ಗ್ರಾಮಸ್ಥರಲ್ಲಿ ಮನವಿ ಮಾಡಿದರು. ಈ ಸಂದರ್ಭದಲ್ಲಿ ಗುಳೇದಗುಡ್ಡ ಬ್ಲಾಕ್ ಅಧ್ಯಕ್ಷ ಸಂಜಯ ಬರಗುಂಡಿ, ಪ್ರಕಾಶ ಮೇಟಿ, ಬಿ.ಬಿ. ಸೂಳಿಕೇರಿ, ಸರಸ್ವತಿ ಮೇಟಿ, ಸಂಜು ಚಿಮ್ಮನಕಟ್ಟಿ, ಶ್ರೀಕಾಂತ ಗುಡ್ಡದ, ಕೆ.ಕೆ.ಕುಂಬಾರ, ಟಿ.ಎಸ್. ಮೊಕಾಶಿ, ಬಸನಗೌಡ ಹದ್ಲಿ, ಯಲ್ಲಪ್ಪ ಪೂಜಾರಿ, ಶಿವಾನಂದ ಲೆಂಕೆನ್ನವರ, ರಂಗನಾಥ ಮೊಕಾಶಿ, ಯಮನೂರ ಗುಡ್ಡದ ಇನ್ನಿತರ ಪ್ರಮುಖರು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡರಾದ ಅಬ್ದುಲರಜಾಕ ತಟಗಾರ, ರವೀಂದ್ರ ಕಲಬುರಗಿ, ಶರಣಪ್ಪ ಆಮದಿಹಾಳ, ವೆಂಕಟೇಶ ಸಾಕಾ, ವಿಜಯ ಗದ್ದನಕೇರಿ ಮತ್ತಿತರರು ಮಾತನಾಡಿ ಕಾಂಗ್ರೆಸ್ ಪಕ್ಷದ ಧ್ಯೇಯ ಧೋರಣೆಗಳನ್ನು ವಿವರಿಸಿದರು. ವೇದಿಕೆಯಲ್ಲಿ ನಗರಸಭೆ ಕಾಂಗ್ರೆಸ್ ಸದಸ್ಯರು, ಪಕ್ಷದ ವಿವಿಧ ಹಂತಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಗುಳೇದಗುಡ್ಡ ಭಾಗದ ಕಟಗೇರಿ ಗ್ರಾಮದಲ್ಲಿ ಲೋಕಸಭಾ ಕಾಂಗ್ರೆಸ್ ಅಭ್ಯರ್ಥಿ ಸಂಯುಕ್ತಾ ಪಾಟೀಲ, ಶಾಸಕ ಭೀಮಸೇನ ಚಿಮ್ಮನಕಟ್ಟಿ ಮತಯಾಚನೆ ಮಾಡಿದರು. ಇಳಕಲ್ ನಗರದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಶಾಸಕ ವಿಜಯಾನಂದ ಕಾಶಪ್ಪನವರ ಮಾತನಾಡಿದರು. (ಬಲಚಿತ್ರ)

ನನ್ನ ಗೆಲುವಿಗೆ ಅಣ್ಣ ವಿಜಯಾನಂದ ಪಣ: ಸಂಯುಕ್ತಾ

ಇಳಕಲ್: ಲೋಕಸಭೆ ಚುನಾವಣೆಯಲ್ಲಿ ಬಾಗಲಕೋಟೆ ಮತಕ್ಷೇತ್ರದಿಂದ ನನ್ನನ್ನು ನಮ್ಮಣ್ಣ ವಿಜಯಾನಂದ ಕಾಶಪ್ಪನವರ ಗೆಲ್ಲಿಸಿಯೇ ತೀರುತ್ತಾರೆ ಆ ವಿಶ್ವಾಸ ನನಗಿದೆ ಎಂದು ಕಾಂಗ್ರೆಸ್ ಅಭ್ಯರ್ಥಿ ಸಂಯುಕ್ತಾ ಪಾಟೀಲ ಹೇಳಿದರು.

ಮಂಗಳವಾರ ರಾತ್ರಿ ಇಲ್ಲಿನ ಕಂಠಿ ಸರ್ಕಲ್‌ನಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯ ಸರಕಾರದ ಗ್ಯಾರಂಟಿ ಯೋಜನೆಗಳು ಸಂಪೂರ್ಣ ಫಲಪ್ರದವಾಗಿದ್ದು ಅದರ ಫಲಾನುಭವಿಗಳು ಪಕ್ಷದ ಕೈ ಹಿಡಿಯುತ್ತಾರೆ. ಜೊತೆಗೆ ಈ ಭಾಗದ ಶಾಸಕರು ಮಾಡಿದ ಅಭಿವೃದ್ಧಿ ಕಾರ್ಯಗಳು ಕಾಂಗ್ರೆಸ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಲಿವೆ ಎಂದರು. ಶಾಸಕ ವಿಜಯಾನಂದ ಕಾಶಪ್ಪನವರ ಮಾತನಾಡಿ, ಸುಳ್ಳು ಭರವಸೆ ನೀಡುತ್ತಾ ದೇಶವಾಸಿಗಳ ಕಣ್ಣಿಗೆ ಮಣ್ಣೆರೆಚುವ ಕಾರ್ಯವನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಮಾಡುತ್ತ ಬಂದಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಜಾರಿಗೆ ತಂದ ಗ್ಯಾರಂಟಿ ಯೋಜನೆಗಳನ್ನು ಕಾಪಿ ಮಾಡುವ ಕೆಲಸ ಬಿಜೆಪಿ ಮಾಡುತ್ತಿದೆ. ಕರ್ನಾಟಕದಲ್ಲಿ ಸೋಲು ಉಂಡಂತೆ ಕೇಂದ್ರದಲ್ಲಿಯೂ ಅದು ಸೋಲಲಿದೆ ಎಂದು ಭವಿಷ್ಯ ನುಡಿದರು. ಪಕ್ಷದ ಮುಖಂಡರು, ಕಾರ್ಯಕರ್ತರು ಅಭಿಮಾನಿಗಳು ಇದ್ದರು.

ಕಾಂಗ್ರೆಸ್‌ಗೆ ಪಂಚಮಸಾಲಿ ಯುವಕರ ಬೆಂಬಲ

ಗದಗ: ಯುವಕರಿಗೆ ಯುವ ನಿಧಿ ನೀಡುವ ಮೂಲಕ ಕಾಂಗ್ರೆಸ್ ಪಕ್ಷವು ಯುವ ಸಮುದಾಯ ಬಲಿಷ್ಠ ಗೊಳಿಸಿದ್ದು, ಚುನಾವಣೆಯಲ್ಲಿ ಪಂಚಮಸಾಲಿ ಸಮಾಜದ ಯುವಕರು ಕಾಂಗ್ರೆಸ್‌ಗೆ ಮತ ನೀಡಿ ಅಭ್ಯರ್ಥಿ ಆನಂದಸ್ವಾಮಿ ಗಡ್ಡದ್ದೇವರಮಠರ ಆಯ್ಕೆಗೆ ಶ್ರಮಿಸುವಂತೆ ಪಂಚಮಸಾಲಿ ಸಮಾಜದ ಧುರೀಣ ಚನ್ನವೀರಪ್ಪ ಮಳಗಿ ಹೇಳಿದರು.

ಎಪಿಎಂಸಿ ಯಾರ್ಡನಲ್ಲಿ ಕಾಂಗ್ರೆಸ್ ಬೆಂಬಲಿತ ಪಂಚಮಸಾಲಿ ಸಮಾಜದ ಸಭೆಯಲ್ಲಿ ಮಾತನಾಡಿದರು. ಜಿಲ್ಲಾಧ್ಯಕ್ಷ ಅನಿಲ ಕುಮಾರ್ ಪಾಟೀಲ್ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಬೆಂಬಲಿತ ಪಂಚಮಸಾಲಿ ಸಮಾಜದ ಸಭೆಯಲ್ಲಿ ಮಾಜಿ ನಗರಸಭಾ ಸದಸ್ಯ ಸಿ.ಕೆ. ಮಾಳಶೆಟ್ಟರ, ಬಸವರಾಜ ಮನಗುಂಡಿ, ಈರನಗೌಡ್ರು ಪಾಟೀಲ, ಅಜ್ಜನಗೌಡ್ರು ಹಿರೇಮನಿ ಪಾಟೀಲ್, ಎಂ.ಎಸ್ ಮಲ್ಲಾಪುರ, ಸಿದ್ದು ಪಾಟೀಲ, ದುಂಡಪ್ಪ ಆಸಗಿ, ಶೇಕಣ್ಣ, ಶರಣಪ್ಪ ಗೋಳಗೊಳಕಿ, ರಮೇಶ್ ಬಂಡಿ, ರಮೇಶ ರೋಣದ, ಸಂಗಮೇಶ ಕೌಳಿಕಾಯಿ, ರುದ್ರಣ್ಣ ಮಾರಣಬಸರಿ, ರಾಜು ಸುಂಕದ, ಬಸವರಾಜ,ಕುಂದಗೋಳ, ಮುತ್ತು ಮುಳವಾಡ, ಸುದೀಪ ಕಣವಿ, ಮಂಜುನಾಥ ಬಾಣದ, ಕೆ.ಆರ್. ಚನ್ನಪ್ಪಗೌಡ್ರು, ಶರಣು ಬೋಳಮ್ಮನವರ, ಸುಮಿತ್ ಮಲಾಪುರ, ರಾಮನಗೌಡ್ರು, ಜಗದೀಶ ಸಂಕನಗೌಡ್ರ, ಬಸವರಾಜ ಎಲ್ಲಿ ವಿಜಯ ಮಹಾತೇಶ ಕೋಟೂರು ಶೆಟ್ರ, ಜಿ.ಎಸ್. ಗಡಾದ, ಸೀದಾಲಿಂಗಪ್ಪ ತುರಾಕಣಿ, ಮೋಹನ್ ಕಮತರ್, ಕಿರಣ್ ಕಮತರ್, ಜಗದೀಶ ಚನ್ನಪಗೌಡ್ರ, ವಡ್ಡಪ್ಪ ಕಮತರ್, ಹಿರಿಯರಾದ ಬಸವರಾಜ ಸುಕಾಪುರ, ಮಲ್ಲಪ್ಪ ಕಲ್ಲಗುಡಿ, ವಿಜಯ್ ನೀಲಗುಂದ, ಎಂ.ವೈ.ಪಾಟೀಲ, ಅಶೋಕ್ ಶಿರಹಟ್ಟಿ, ಈರಣ್ಣ ಬಿಕದ್ದಕಟ್ಟಿ, ಬುದ್ದಪ್ಪ ಮುತ್ತು ಮುಳವಾಡ ಇತರರಿದ್ದರು.

ಕಾಂಗ್ರೆಸ್ ಹೆಚ್ಚು ಸ್ಥಾನ; ಟಿ.ಈಶ್ವರ

ಲಕ್ಷ್ಮೇಶ್ವರ: ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಉತ್ತಮ ಸಾಧನೆ ಮಾಡಲಿದ್ದು, ಮತದಾರರು ಮತ್ತೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಿದ್ದಾರೆ. ಈ ಬಾರಿ ರಾಜ್ಯದಲ್ಲಿ ಕಾಂಗ್ರೆಸ್‌ಗೆ ಸುಮಾರು 18-20 ಸ್ಥಾನಗಳು ಲಭಿಸಲಿವೆ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಟಿ.ಈಶ್ವರ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಸಂಯುಕ್ತ ಕರ್ನಾಟಕ ಪ್ರತಿನಿಧಿಯೊಂದಿಗೆ ಮಾತನಾಡಿ, ಕೇಂದ್ರ ಸರಕಾರ 10 ವರ್ಷಗಳಿಂದ ಸುಳ್ಳು ಭರವಸೆ ನೀಡುವದರಲ್ಲಿ ಕಾಲ ಕಳೆದಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ನೀಡಿದ ಗ್ಯಾರಂಟಿ ಭರವಸೆ ನೀಡಿದಂತೆ ಈಡೇರಿಸಿದೆ. ಇದನ್ನು ಅರಿತ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಹೆಚ್ಚಿನ ಬೆಂಬಲ ನೀಡುತ್ತಿದ್ದಾರೆ. ರಾಜ್ಯದ ಹಲವಾರು ಕ್ಷೇತ್ರಗಳಲ್ಲಿ ಪ್ರವಾಸ ಮಾಡಿದ್ದು ಎಲ್ಲೆಡೆ ಕಾಂಗ್ರೆಸ್‌ಗೆ ಉತ್ತಮ ಬೆಂಬಲ ವ್ಯಕ್ತವಾಗಿದ್ದು ಹೆಚ್ಚು ಸ್ಥಾನ ಗೆಲ್ಲುವ ವಿಶ್ವಾಸ ಮೂಡಿದೆ ಎಂದರು.

ಮೋದಿ ವಿರುದ್ಧ ಆಯೋಗ ಸ್ವಯಂ ಪ್ರೇರಿತ ದೂರು ದಾಖಲಿಸಲಿ



ಗದಗ: ಪ್ರಧಾನಿ ನರೇಂದ್ರ ಮೋದಿ ಎರಡು ಮೂರು ದಿನಗಳಿಂದ ಸಮಾಜದಲ್ಲಿ ಧರ್ಮ ಧರ್ಮಗಳ ಮಧ್ಯೆ ದ್ವೇಷ ಬಿತ್ತುವ ಹೇಳಿಕೆ ಸಾರ್ವ ಜನಿಕವಾಗಿ ನೀಡುತ್ತಿದ್ದು, ಚುನಾವಣಾ ಆಯೋಗ ನರೇಂದ್ರ ಮೋದಿ ವಿರುದ್ಧ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ಕ್ರಮ ಜರುಗಿಸಬೇಕು ಎಂದು ಕಾನೂನು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಆಗ್ರಹಿಸಿದರು.

ನಗರದಲ್ಲಿ ಬುಧವಾರ ಪತ್ರಿಕಾಗೋಷ್ಠಿ ನಡೆಸಿದ ಅವರು, ಈಗಾಗಲೇ ಚುನಾವಣೆ ನಡೆದಿರುವ ರಾಜ್ಯಗಳಲ್ಲಿ ಹಿನ್ನಡೆ ಆಗುತ್ತದೆಯೆಂಬ ಸುಳಿವು ಪ್ರಧಾನಿ ನರೇಂದ್ರ ಮೋದಿ ಪಡೆದಿದ್ದು. ತಮ್ಮ ಮಾತುಗಳಲ್ಲಿನ ಹಿಡಿತ ಕಳೆದುಕೊಂಡ ಪ್ರಧಾನಿ, ಜಾತಿ, ಧರ್ಮ ಧರ್ಮಗಳ ಮಧ್ಯೆ ಕಂದಕ ನಿರ್ಮಿಸಿ ಮಧ್ಯೆ ಘರ್ಷಣೆಗೆ ಪ್ರೇರಣೆ ನೀಡುತ್ತಿದ್ದಾರೆ. ಇದು ಮೋದಿಗೆ ಇದು ಶೋಭೆ ತರುವದಿಲ್ಲ. ದೇಶದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಲ್ಲಿ ಹಿಂದೂ ಮಹಿಳೆಯ ತಾಳಿ ಕಿತ್ತು ಮುಸ್ಲಿಂರಿಗೆ ನೀಡುತ್ತಾರೆ. ಸಂವಿಧಾನ ಬದ್ಧವಾಗಿರುವ ದಲಿತರ ಮೀಸಲಾತಿ, ಆಸ್ತಿ ಕಿತ್ತು ಮುಸಲ್ಮಾನರಿಗೆ ನೀಡುತ್ತಾರೆಂದು ಬಡಬಡಿಸುತ್ತಿದ್ದಾರೆ. ಧರ್ಮ, ಜಾತಿಗಳ ಮಧ್ಯೆ ಕಂದಕ ನಿರ್ಮಿಸುತ್ತಿರುವ ನರೇಂದ್ರ ಮೋದಿ ವಿರುದ್ಧ ಚುನಾವಣಾ ಆಯೋಗ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ನಡೆಸುವದು ಅವಶ್ಯ ಎಂದು ಪ್ರತಿಪಾದಿಸಿದರು.

ದೇಶದ ಆಸ್ತಿಗಳಾಗಿರುವ ಏರ್‌ಪೋರ್ಟ್, ರೈಲು ನಿಲ್ದಾಣ, ಸ್ಟೇಡಿಯಂ, ರಸ್ತೆ, ಗ್ಯಾಸ್ ಲೈನ್‌ಗಳನ್ನು ಶ್ರೀಮಂತರಿಗೆ ಮಾರಾಟ ಮಾಡುತ್ತಿದ್ದಾರೆ. ಗುಜರಾತಿಗಳು, ಅಂಬಾನಿ, ಅದಾನಿಗಳು ಮಾತ್ರ ದೇಶದಲ್ಲಿ ಶ್ರೀಮಂತರಾಗಿ ರಬೇಕು. ಉಳಿದವರು ಬಡವರಾಗಿಯೇ ಇರಬೇಕೆಂಬ ಹುನ್ನಾರ ಹೊಂದಿದ್ದಾರೆ. ರಾಜ್ಯದಲ್ಲಿ ಮಳೆ ವಿಫಲವಾಗಿ ಭೀಕರ ಬರಗಾಲ ಆವರಿಸಿದೆ. ಬರ ಪರಿಹಾರ ನೀಡುವಂತೆ ಆರು ತಿಂಗಳು ದುಂಬಾಲು ಬಿದ್ದರೂ ಸಹ ಕೇಂದ್ರ ಸರಕಾರ ರಾಜ್ಯಕ್ಕೆ ನೆರವು ನೀಡಲಿಲ್ಲ. ಬರ ಪರಿಹಾರ ನಿಧಿಯಿಂದ ನೆರವು ಕೊಡಿಸುವಂತೆ ಆಗ್ರಹಿಸಿ ಸರ್ವೋಚ್ಚ ನ್ಯಾಯಾಲಯದ ಮೊರೆ ಹೋಗಬೇಕಾಗಿ ಬಂದಿರುವದು ದುರ್ದೈವದ ಸಂಗತಿ. ಕೇಂದ್ರ ಸರಕಾರಕ್ಕೆ ಭೀಕರ ಬರಗಾಲದಿಂದ ತತ್ತರಿಸಿರುವ ಕರ್ನಾಟಕಕ್ಕೆ ನೆರವು ನೀಡುವ ಮನಸ್ಸಿಲ್ಲ. ರಾಜ್ಯದ ರೈತರು ಪರದಾಡುವದನ್ನು ನೋಡಿ ವಿಕೃತ ಸಂತೋಷ ಪಡುತ್ತಿದೆ ಎಂದು ಆರೋಪಿಸಿದರು.

ಇಂದು ಸಿಎಂ ಪ್ರಚಾರ..

ಹಾವೇರಿ ಗದಗ ಲೋಕಸಭಾ ಕಾಂಗ್ರೆಸ್ ಅಭ್ಯರ್ಥಿ ಆನಂದಸ್ವಾಮಿ ಗಡ್ಡದ್ದೇವರಮಠ ಪರವಾಗಿ ಏ.25ರಂದು ಗಜೇಂದ್ರಗಡದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಧ್ಯಾಹ್ನ 3ಕ್ಕೆ ಪ್ರಚಾರ ನಡೆಸಆದ್ದಾರೆಂದು ಸಚಿವ ಡಾ.ಎಚ್.ಕೆ.ಪಾಟೀಲ ವಿವರಿಸಿದರು.

ಬಾಕಳೆ ಕುಟುಂಬಕ್ಕೆ ಸಾಂತ್ವನ...

ಗದಗ ನಗರಸಭೆಯ ಉಪಾಧ್ಯಕ್ಷೆ ಸುನಂದಾ ಬಾಕಳೆ ಪುತ್ರ ಕಾರ್ತಿಕ ಬಾಕಳೆ ಸೇರಿದಂತೆ ನಾಲ್ಕು ಜನರ ಬರ್ಬರ ಹತ್ಯೆಯನ್ನು ಸರಕಾರ, ಪೊಲೀಸ್ ಇಲಾಖೆ ಸಮರ್ಪಕವಾಗಿ ನಿಭಾಯಿಸಿದೆ. ಈಗಾಗಲೇ ಆರೋಪಿಗಳನ್ನು ಬಂಧಿಸಿ ಜೈಲಿಗಟ್ಟಿದೆ. ಈ ದಿಸೆಯಲ್ಲಿ ಪೊಲೀಸ್ ಅಧಿಕಾರಿಗಳಿಗೆ ಅಭಿನಂದಿಸುವದಾಗಿ ಸಚಿವ ಡಾ.ಎಚ್.ಕೆ.ಪಾಟೀಲ ಹೇಳಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ, ಶಾಸಕ ಜಿ.ಎಸ್.ಪಾಟೀಲ ಮಾತನಾಡಿ, ಹಾವೇರಿ ಗದಗ -ಲೋಕಸಭಾ ಕ್ಷೇತ್ರದಲ್ಲಿ ಕಳೆದ ಹತ್ತು ವರ್ಷಗಳಿಂದ ನಿರೀಕ್ಷಿತ ಯಾವದೇ ಬದಲಾವಣೆಯಾಗಿಲ್ಲ. ಹಾಲಿ ಸಂಸದರು ಅಭಿವೃದ್ಧಿಯತ್ತ ಗಮನ ಹರಿಸದ್ದರಿಂದ ಕ್ಷೇತ್ರ ಹಿಂದುಳಿದಿದೆ. ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಆನಂದಸ್ವಾಮಿ ಗಡ್ಡದ್ದೇವರಮಠ ಆಯ್ಕೆಯಾಗುವ ಎಲ್ಲ ಲಕ್ಷಣಗಳು ಗೋಚರಿಸುತ್ತಿವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿ ಗೆಲುವು ಶತಸಿದ್ಧ; ಗದ್ದಿಗೌಡರ ವಿಶ್ವಾಸ

ಜಮಖಂಡಿಯಲ್ಲಿ ಬಿಜೆಪಿ ಅಭ್ಯರ್ಥಿ ಪಿ.ಸಿ.ಗದ್ದಿಗೌಡರ ಪಾದಯಾತ್ರೆ | ಬಿಜೆಪಿ ಜೆಡಿಎಸ್ ಮತಯಾಚನೆ

ಜಮಖಂಡಿ ನಗರದಲ್ಲಿ ಸಂಸದ, ಬಾಗಲಕೋಟೆ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪಿ.ಸಿ.ಗದ್ದಿಗೌಡರ ಪಾದಯಾತ್ರೆ ನಡೆಸಿ ಮತಯಾಚಿಸಿದರು. ಬಾದಾಮಿಯಲ್ಲಿ ಜರುಗಿದ ಶಕ್ತಿ ಕೇಂದ್ರದ ಬೂತ್ ಮಟ್ಟದ ಸಭೆಯಲ್ಲಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪಿ.ಸಿ.ಗದ್ದಿಗೌಡರ ಪರ ಮಾಜಿ ಶಾಸಕ ಎಂ.ಕೆ.ಪಟ್ಟಣಶೆಟ್ಟಿ ಮತಯಾಚಿಸಿದರು. ಜೆಡಿಎಸ್ ಬಿಜೆಪಿ ಮುಖಂಡರು, ಕಾರ್ಯಕರ್ತರು ಇದ್ದರು.

ಬಾಗಲಕೋಟೆ: ಪ್ರಧಾನಿ ನರೇಂದ್ರ ಮೋದಿ ಅವರು ಹಿಂದೂಗಳ ಕನಸಾಗಿದ್ದ ರಾಮ ಮಂದಿರ ನಿರ್ಮಾಣ, ಕಾಶ್ಮೀರದ ವಿಚಾರದಲ್ಲಿ ದಿಟ್ಟ ನಿಲುವು ಕೈ ಗೊಂಡಿರುವುದು ಭಾರತೀಯರಿಗೆ ಅತೀವ ಸಂತಸ ತಂದಿದೆ. ಹೀಗಾಗಿ ಮೂರನೇ ಬಾರಿಗೆ 400 ಸ್ಥಾನಗಳೊಂದಿಗೆ ಮೋದಿ ಅವರು ಅಧಿಕಾರದ ಚುಕ್ಕಾಣಿ ಹಿಡಿಯಲಿದ್ದಾರೆ. ಅದಕ್ಕಾಗಿ ಜಿಲ್ಲೆಯ ಮತದಾರರು ಬಿಜೆಪಿಗೆ ಮತ ನೀಡಬೇಲು ಎಂದು ಹಾಲಿ ಸಂಸದ, ಬಿಜೆಪಿ ಅಭ್ಯರ್ಥಿ ಪಿ.ಸಿ.ಗದ್ದಿಗೌಡರ ವಿಶ್ವಾಸ ವ್ಯಕ್ತಪಡಿಸಿದರು.

ಜಮಖಂಡಿ ನಗರದಲ್ಲಿ ಶಾಸಕ ಜಗದೀಶ ಗುಡಗುಂಟಿ ಅವರಿಗೆ ಜತೆಯಾಗಿ ಪಾದಯಾತ್ರೆ ನಡೆಸಿದ ಅವರು, ವಕೀಲಿ ವೃತ್ತಿ ನಂತರ ಸಾರ್ವಜನಿಕ ಸೇವೆಗಾಗಿ ನಾನು ರಾಜಕಾರಣಕ್ಕೆ ಬಂದಿದ್ದೇನೆ. ನಾಲ್ಕು ಬಾರಿ ಸಂಸದನಾಗಿ ಜನರ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡಿದ್ದೇನೆ. ಜನ ನನಗೆ ಆಶೀರ್ವಾದ ಮಾಡುವ ವಿಶ್ವಾಸವಿದೆ. ಏ.28ರಂದು ಮಧ್ಯಾಹ್ನ 3ಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಬಾಗಲಕೋಟೆಗೆ ಆಗಮಿಸುತ್ತಿದ್ದು, ಹೆಚ್ಚಿನ ಸಂಖ್ಯೆ ಯಲ್ಲಿ ಕಾರ್ಯಕರ್ತರು, ಪಕ್ಷದ ಹಿತೈಷಿಗಳು ಆಗಮಿಸಬೇಕು. ಮೋದಿ ಅವರ ಕಾರ್ಯಕ್ರಮವನ್ನು ಯಶಸ್ವಿ ಗೊಳಿಸಬೇಕೆಂದು ಮನವಿ ಮಾಡಿದರು.

ಶಾಸಕ ಜಗದೀಶ ಗುಡಗುಂಟಿ ಮಾತನಾಡಿ, ಕಾಂಗ್ರೆಸ್ ಪೊಳ್ಳು ಗ್ಯಾರಂಟಿಗಳನ್ನು ಜನ ತಿರಸ್ಕರಿಸಲಿದ್ದು, ಮೋದಿ ಗ್ಯಾರಂಟಿಗೆ ಜನ ಬೆಂಬಲ ಸೂಚಿಸಲಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ ತಕ್ಕಪಾಠ ಕಲಿಸಲಿದ್ದಾರೆ ಎಂದರು. ಈ ವೇಳೆ ಪಕ್ಷದ ಕಾರ್ಯಕರ್ತರು ಅಪಾರ ಬೆಂಬಲಿಗರು ಇದ್ದರು.

ಮೋದಿಜಿ ಪ್ರಧಾನಿ ಆಗಲು ಗದ್ದಿಗೌಡರ ಗೆಲುವು ಅವಶ್ಯ....

ಬಾದಾಮಿ: ಈ ಬಾರಿಯ ಬಾಗಲ ಕೋಟೆ ಲೋಕಸಭೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪಿ.ಸಿ.ಗದ್ದಿಗೌಡರ ಅವರಿಗೆ ಮತ ನೀಡಿ ಗೆಲ್ಲಿಸುವ ಮೂಲಕ ದೇಶದಲ್ಲಿ ನರೇಂದ್ರ ಮೋದಿ ಅವರನ್ನು ಮತ್ತೊಮ್ಮೆ ಪ್ರಧಾನಿ ಮಾಡುವ ಸಂಕಲ್ಪ ಮಾಡಬೇಕು ಎಂದು ಮಾಜಿ ಶಾಸಕ ಎಂ.ಕೆ.ಪಟ್ಟಣಶೆಟ್ಟಿ ಮನವಿ ಮಾಡಿದರು.

ನಗರದ ಅಕ್ಕಮಹಾದೇವಿ ಕಲ್ಯಾಣ ಮಂಟಪದಲ್ಲಿ ಜರುಗಿದ ಬಾದಾಮಿಯ ಶಕ್ತಿ ಕೇಂದ್ರದಲ್ಲಿ ಬರುವ ಬೂತ್ ಮಟ್ಟದ ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿ, ಬೂತ್ ಮಟ್ಟದಲ್ಲಿ ಬಿಜೆಪಿ ಪರ ಪ್ರಚಾರ ಕೈಗೊಳ್ಳುವುದರ ಜೊತೆಗೆ ಕೇಂದ್ರದ ಯೋಜನೆ ಮತದಾರರಿಗೆ ಮನವರಿಕೆ ಮಾಡಿಕೊಡಬೇಕು ಎಂದರು.

ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಮಹಾಂತೇಶ ಮಮದಾಪುರ ಮಾತನಾಡಿ, ಪಕ್ಷದ ಅಭ್ಯರ್ಥಿ ಗದ್ದಿಗೌಡರರು 20 ವರ್ಷಗಳ ಅಧಿಕಾರದ ಅವಧಿಯಲ್ಲಿ ಕ್ಷೇತ್ರಕ್ಕೆ ತಂದಿರುವ ಅನುದಾನ ಮತ್ತು ಯೋಜನೆಗಳನ್ನು ಪ್ರಚಾರ ಪಡಿಸಬೇಕು. ಜನರ ಮನೆ ಬಾಗಿಲಿಗೆ ತಲುಪಿರುವ ಕೇಂದ್ರದ ಯೋಜನೆಗಳ ಬಗ್ಗೆ ಹೆಚ್ಚಿನ ಪ್ರಚಾರ ಮಾಡಬೇಕೆಂದು ಹೇಳಿದರು.

ಜೆಡಿಎಸ್ ಜಿಲ್ಲಾ ಅಧ್ಯಕ್ಷ ಹನಮಂತ ಮಾವಿನಮರದ ಮಾತನಾಡಿ, ದೇಶದಲ್ಲಿ ಮೋದಿ ಪ್ರಧಾನಿ ಆಗಬೇಕೆಂದರೆ ಬಾಗಲಕೋಟೆ ಕ್ಷೇತ್ರದಲ್ಲಿ ಗದ್ದಿಗೌಡರ ಗೆಲ್ಲಲೇಬೇಕು. ಹೀಗಾಗಿ ಗದ್ದಿಗೌಡರನ್ನು ಗೆಲ್ಲಿಸಲು ಬೂತ್ ಮಟ್ಟದ ಕಾರ್ಯಕರ್ತರು ಹಗಲಿರುಳು ಶ್ರಮಿಸಬೇಕೆಂದು ವಿನಂತಿಸಿದರು. ಕೃಷ್ಣಾ ಕಾಡಾ ಮಾಜಿ ಅಧ್ಯಕ್ಷ ಬಿ.ಪಿ. ಹಳ್ಳೂರ ಮಾತನಾಡಿದರು. ಹಿರಿಯರಾದ ಎಫ್. ಆರ್.ಪಾಟೀಲ, ಕುಮಾರಗೌಡ ಜನಾಲಿ, ಬಸವರಾಜ ಪಾಟೀಲ, ಮಂಡಲ ಅಧ್ಯಕ್ಷ ನಾಗರಾಜ ಕಾಚೆಟ್ಟಿ, ಜಿಲ್ಲಾ ಕಾರ್ಯದರ್ಶಿ ಮುತ್ತು ಉಳ್ಳಾಗಡ್ಡಿ, ಶಿದ್ದಣ್ಣ ಶಿವನಗುತ್ತಿ, ಭೀಮನಗೌಡ ಪಾಟೀಲ, ಎಂ. ಎಸ್.ಹಿರೇಹಾಳ, ಹೊನ್ನಯ್ಯ ಹಿರೇಮಠ, ಅಡಿವೆಪ್ಪ ಢಾಣಕಶಿರೂರ ಸೇರಿದಂತೆ ಎರಡು ಪಕ್ಷದ ಮುಖಂಡರು, ಪದಾಧಿಕಾರಿಗಳು, ಕಾರ್ಯಕರ್ತರು ಉಪಸ್ಥಿತರಿದ್ದರು.

> ಬಾಗಲಕೋಟೆ ಹಿಂದುತ್ವದ ನೆಲೆ. ಈ ಜಿಲ್ಲೆಯಲ್ಲಿ ಕೇಸರಿ ಗುಲಾಲು ಹಾರಿಸುವುದು ನಿಶ್ಚಿತ. ಮೋದಿ ಅವರ ಅವಧಿಯಲ್ಲಿ ನಾನು ಸಂಸದನಾಗಿರುವುದು ಹೆಮ್ಮೆಯ ವಿಚಾರ. ಹೋದಲ್ಲೆಲ್ಲ ಅಪಾರ ಜನಬೆಂಬಲ ನನಗೆ ಸಿಗುತ್ತಿದೆ. ಗೆಲುವು ಖಚಿತ
>
> ■ **ಪಿ.ಸಿ.ಗದ್ದಿಗೌಡರ,** ಬಿಜೆಪಿ ಅಭ್ಯರ್ಥಿ

SK CLASSIFIED
ಹುಬ್ಬಳ್ಳಿ ಆವೃತ್ತಿ ದರ

ಅಳತೆ	ದರ	ಕೊಡುಗೆ
4x5	790/-	3+1 - 5+2
4x10	1260/-	3+1 - 5+2

ಕನ್ನಡ ಡೈಜೆಸ್ಟ್ ಕಸ್ತೂರಿ ತಪ್ಪದೆ ಓದಿ

ಜಮೀನು ಮಾರಾಟಕ್ಕಿದೆ
ಬೆಳಗಾವಿ ಜಿಲ್ಲೆಯ ಯರಗಟ್ಟಿ ತಾಲೂಕಿನ ಯರಝರ್ವಿ ಗ್ರಾಮದ ನಿವಾಸಿ ಶ್ರೀ ಪಂಚಪ್ಪ ಮುದಕಪ್ಪ ದಾಸಪ್ಪನವರ ಇವರ ಜಮೀನು ಯರಝರ್ವಿ ಹದ್ದಿನಲ್ಲಿರುವ ಸರ್ವೆ ನಂ. 84, 3 ಎಕರೆ ಎರಿ ಜಮೀನು, ಒಂದು ಬೋರವೆಲ್ಲ ಸಹಿತ ಒಂದು ಮನೆ ಮಾರಾಟಕ್ಕಿದೆ ಆಸಕ್ತರು ಸಂಪರ್ಕಿಸಿ
9535517464

ಮಾನಸಿಕ ಅಸ್ವಸ್ಥತೆ, ವ್ಯಸನ, ಲೈಂಗಿಕ ಸಮಸ್ಯೆಗಳು
ಸ್ಕಿಜೋಫ್ರೇನಿಯಾ, ಬೈಪೋಲಾರ್ ಮೂಡ್ ಡಿಸಾರ್ಡರ್, ಉನ್ಮಾದ, ಖಿನ್ನತೆ, ಒ.ಸಿ.ಡಿ, ವಾಮಾಚಾರ, ಮದ್ಯ, ತಂಬಾಕು, ಸಿಗರೇಟ್, ಗುಟಖಾ, ಮಾವಾ, ಗಾಂಜಾ, ಮಿಶ್ರಿ, ಡಿ-ಅಡಿಕ್ಷನ್, ಅಕಾಲಿಕ ಸ್ಖಲನ, ಶಕ್ತಿಹೀನತೆ, ಸ್ವಪ್ನ, ಹಸ್ತಮೈಥುನದಿಂದ ದೌರ್ಬಲ್ಯ, ಲೈಂಗಿಕ ಸಮಸ್ಯೆಗಳು ಮತ್ತು ವೈಧ್ಯರ ಆರೈಕೆ ಇತ್ಯಾದಿ ಸಮಸ್ಯೆಗಳಿಗೆ ಸಂಪರ್ಕಿಸಿರಿ:
ನಿರ್ಮಲ ವ್ಯಸನಮುಕ್ತಿ ಪುನರ್ವಸತಿ ಮತ್ತು ಆರೈಕೆ ಕೇಂದ್ರ
ಸ್ಟೇಷನ್ ರಸ್ತೆ, ಮಿರಜ್ (ಸಾಂಗಲಿ)
9922646566
9028081339

ಓದುಗರ ಗಮನಕ್ಕೆ
- ಜಾಹೀರಾತು ವ್ಯವಸ್ಥಾಪಕರು

NEFT (ನೆಫ್ಟ್) ಮೂಲಕ ಬ್ಯಾಂಕ್ ಖಾತೆಗೆ ಹಣ ಸಂದಾಯಿಸುವ ವಿವರ
1) A/c No. (ಖಾತೆ ಸಂ.) 0832000101347401
2) IFSC CODE (ಐಎಫ್‌ಎಸ್‌ಸಿ ಸಂಕೇತ): KARB 0000083
3) ಹಣ ಸಂದಾಯಿಸುವ ಹೆಸರು: LOKA SHIKSHANA TRUST
4) ಬ್ಯಾಂಕ್ ಹೆಸರು : KARNATAKA BANK
BRANCH: KASTURBA ROAD, BANGALORE-560001.
5) ಪ್ಯಾನ್ ಸಂಖ್ಯೆ: AAATL 1086H
6) ವಿ.ಸೂ: ತಾವು ಜಮೆ ಮಾಡಿದ ಪೇ ಇನ್ ಸ್ಲಿಪ್ ಜೊತೆಗೆ ಪ್ರಕಟಿಸಬೇಕಾದ ಜಾಹೀರಾತನ್ನು ಸಂ.ಕ. ಕಚೇರಿಗೆ ಕಳುಹಿಸಬೇಕು.
* ಡಿ.ಡಿ. ಕಳಿಸುವುದಿದ್ದಲ್ಲಿ ಸಂಯುಕ್ತ ಕರ್ನಾಟಕ ಹೆಸರಿನಲ್ಲಿ ಕಳುಹಿಸಬೇಕು.

Edition	Bangalore	Gulburga	Davanagere	Mangalore	All Edition
*Disply Classified	Rs. 40-00	Rs.15-00	Rs. 15-00	Rs. 15-00	Rs.80-00

ಸಂಯುಕ್ತ ಕರ್ನಾಟಕ ಕ್ಲಾಸಿಫೈಡ್ಸ್
ಚಿಕ್ಕ ಜಾಹೀರಾತು..... ಅಗಾಧ ಫಲಿತಾಂಶ! ಜಾಹೀರಾತಿಗಾಗಿ ಸಂಪರ್ಕಿಸಿರಿ:
ಸಂಪರ್ಕಿಸಿರಿ: ಮೊ: 9900049656
ಇ-ಮೇಲ್: skhubli@gmail.com

ನೈರುತ್ಯ ರೈಲ್ವೆ
ಟೆಂಡರ್ ಸೂಚನೆ ಸಂ. 09/2024 ದಿನಾಂಕ: 19.04.2024
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ವಸ್ತುಗಳ ಸರಬರಾಜಿಗಾಗಿ ಐಆರ್‌ಇಪಿಎಸ್ ಮುಖಾಂತರ ಮಾತ್ರ ಇ-ಟೆಂಡರ್ ಆಹ್ವಾನಿಸಿದ್ದಾರೆ. ಟೆಂಡರ್ ಮುಕ್ತಾಯ ಸಮಯ: 10:30 ಗಂಟೆಗಳು

ಕ್ರ	ಟೆಂಡರ್ ಸಂ.	ಸಂಕ್ಷಿಪ್ತ ವಿವರಣೆ (ಇ-ಓಪನ್ ಟೆಂಡರ್‌ಗಳು)	ಪ್ರಮಾಣ	ಟೆಂಡರ್ ಕೊನೆಯ ದಿನಾಂಕ
1	30241329	ಫುಟ್ ಸ್ಟೆಪ್ ಅರೇಂಜ್ಮೆಂಟ್ ಅಸೆಂಬ್ಲಿ ಕಂಪ್ಲೀಟ್	2078 ಸಂ.	29.04.2024
2	56241085	ಲೆಡ್ ಆಸಿಡ್ ಕಡಿಮೆ ನಿರ್ವಹಣೆ ಸೆಕಂಡರಿ ಸೆಲ್ಸ್ 2V 300 AH	934 ಸಂ.	04.06.2024
3	33241031	ಎಲ್‌ಎಚ್‌ಬಿ ಕೋಚ್‌ಗಳಿಗೆ ರಬ್ಬರ್ ಸ್ಪ್ರಿಂಗ್	2982 ಸಂ.	09.05.2024
4	33241088	ಆಕ್ಸಲ್ ಮೌಂಟೆಡ್ ಡಿಸ್ಕ್ ಬ್ರೇಕ್‌ಗಾಗಿ ಪ್ರಮಾಣಿತ ಬ್ರೇಕ್ ಡಿಸ್ಕ್	39 ಸಂ.	13.05.2024
5	29232034	3 ಫೇಜ್ ಲೋಕೊಗಾಗಿ ಸಿಲಿಂಡರಾಕಾರದ ರೋಲರ್ ಬೇರಿಂಗ್ ಸೆಟ್	33 ಸೆಟ್ಸ್	07.05.2024
6	30235006	ಸ್ಲಂಗ್ ವಾಟರ್ ಟ್ಯಾಂಕ್ ಅಸೆಂಬ್ಲಿ ಆಡಿಯಲ್ಲಿ ಸ್ಟೇನ್ಲೆಸ್ ಸ್ಟೀಲ್	50 ಸೆಟ್ಸ್	16.05.2024
7	38241009	ನಿರಂತರ ಸಂಪರ್ಕ ಪಾಲಿಮರ್ ಸೈಡ್ ಬೇರರ್ ಅಸೆಂಬ್ಲಿ	322 ಸೆಟ್ಸ್	01.05.2024
8	60245130	ಮೊಬಿಲ್ ಟೆಂಪ್ SHC 32 ಸಿಂಥೆಟಿಕ್ ಆಂಟಿ-ವೇರ್ ಗ್ರೀಸ್	2003 ಕೆಜಿ	06.05.2024
9	38241007	ಡ್ರಾಯಿಂಗ್ ಸಂಖ್ಯೆ AAL-021101 ಕ್ಕೆ ಪಾಲಿರಿಂಗ್ಸ್-3	4872 ಸಂ.	06.05.2024
10	30231274	ಎಲ್‌ಎಚ್‌ಬಿ ಕೋಚ್‌ಗಳಿಗಾಗಿ ಗ್ರಾವಿಟ ಕಾಕ್ 1/2 ಇಂಚಿನ ಕ್ರೋಮ್ ಲೇಪಿತ	41942 ಸಂ.	13.05.2024
11	30241230	ಆಕ್ಸಿಲರಿ ರಿಸರ್ವಾಯರ್ 200 ಲೀ	353 ಸಂ.	02.05.2024
12	33245004	FTRTIL ಡ್ರಾಯಿಂಗ್‌ಗೆ S-VEL ಸ್ಪೀಡ್ ಸೆನ್ಸರ್	83 ಸಂ.	29.05.2024
13	33241018	ಎಲ್‌ಎಚ್‌ಬಿ ಕೋಚ್‌ಗಳಿಗಾಗಿ ಡಬಲ್ ಮೊಹರು ಕಿಟಕಿ ಗಾಜಿನ ಘಟಕ	4306 ಸಂ.	03.06.2024
14	45241289	ಸ್ಟಾರ್ಟರ್ ಲೆಡ್ ಆಸಿಡ್ ಬ್ಯಾಟರಿ ಸಾಮರ್ಥ್ಯ 8V 290AH	145 ಸಂ.	13.05.2024
15	45241496	500 KVA 750V DG ಸೆಟ್‌ಗೆ ಸೂಕ್ತವಾದ ಬಿ ಚೆಕ್ ಕಿಟ್	290 ಸೆಟ್ಸ್	13.05.2024
16	45241503A	500 KVA 750V DG ಸೆಟ್‌ಗೆ ಸೂಕ್ತವಾದ ಸಿ ಚೆಕ್ ಕಿಟ್	135 ಸೆಟ್ಸ್	09.05.2024
17	30231101	ಆಕ್ಸಲ್ ಬಾಕ್ಸ್ ಅಲ್ಯೂಮಿನಿಯಂ ಡೈ ಕಾಸ್ಟಿಂಗ್‌ಗಾಗಿ ಹಿಂದಿನ ಕವರ್	2714 ಸಂ.	29.04.2024
18	60248969	ವಿವಿಧ ರೀತಿಯ PSC ಸ್ಲೀಪರ್ (1) ಟಿ/8969-1280 ಸಂಖ್ಯೆಗಳು. (2) ಟಿ/8970-3468 ಸಂಖ್ಯೆಗಳು. (3)ಟಿ/8971 ರಿಂದ 8978-35 ಸೆಟ್‌ಗಳು	ವಿವರಣೆಯ ಪ್ರಕಾರ	06.05.2024

ಹೆಚ್ಚಿನ ಮಾಹಿತಿಗಾಗಿ www.ireps.gov.in ವೆಬ್‌ಸೈಟ್‌ಗೆ ಲಾಗಿನ್ ಆಗಿ
PUB/32/AAV/PRB/SWR/2024-25 ಪ್ರಧಾನ ಮುಖ್ಯ ಸಾಮಗ್ರಿಗಳ ಪ್ರಬಂಧಕರು/ಹುಬ್ಬಳ್ಳಿ
South Western Railway-SWR southwesternrailway_swr SWRRLY southwesternrailway SWRRLY

kotak
ಕೋಟಕ್ ಮಹೀಂದ್ರ ಬ್ಯಾಂಕ್ ಲಿಮಿಟೆಡ್.,
ನೋಂದಾಯಿತ ಕಚೇರಿ: 27 ಬಿಕೆಸಿ, ಸಿ27, ಜಿ ಬ್ಲಾಕ್, ಬಾಂದ್ರ ಕುರ್ಲಾ ಕಾಂಪ್ಲೆಕ್ಸ್ ಬಾಂದ್ರ (ಪೂ) ಮುಂಬೈ - 400 051.
ಶಾಖಾ ಕಚೇರಿ: ಕೋಟಕ್ ಮಹೀಂದ್ರ ಬ್ಯಾಂಕ್ ಲಿಮಿಟೆಡ್., ಕೋಟಕ್ ಹೌಸ್, ನಂ. 22, ಎಂ.ಜಿ.ರಸ್ತೆ, ಬೆಂಗಳೂರು-560 001.
ಕಾರ್ಪೋರೇಟ್ ಐಡೆಂಟಿಟಿ: ನಂ.L65110MH1985PLC038137
ಅನುಬಂಧ-IV-A [ನಿಯಮ 8(6)ರ ನಿಬಂಧನೆಯನ್ನು ಓದಿಕೊಂಡಂತೆ]

ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಇ-ಹರಾಜು ಮಾರಾಟ ಸೂಚನೆ

2002 ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 6(2) & 8(6) ಪ್ರಾವಿಸೋದೊಂದಿಗೆ ಓದಿಕೊಂಡಂತೆ 2002 ರ ಹಣಕಾಸು ಆಸ್ತಿಗಳ ಭದ್ರತೆ ಹಾಗೂ ಪುನರ್ ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆಯಡಿ ಹರಾಜು ಮತ್ತು ಮಾರಾಟ ಸೂಚನೆ.

ಸಾಮಾನ್ಯವಾಗಿ ಸಾಲಗಾರರಿಗೆ ಮತ್ತು ನಿರ್ದಿಷ್ಟವಾಗಿ ಸಾಲಗಾರರಿಗೆ ಸೂಚನೆ ನೀಡುವುದೇನೆಂದರೆ, ಕೆಳಕಂಡಂತೆ ವಿವರಿಸಲಾದ ಆಸ್ತಿ/ಆಸ್ತಿಗಳು ಸ್ಥಿರಾಸ್ತಿ / ಸ್ಥಿರಾಸ್ತಿಗಳು ಭದ್ರತಾ ಸಾಲದಾತರಿಗೆ ಅಡವಾನಾದ / ಒತ್ತೆಯಿಟ್ಟದ್ದು, ಇವುಗಳನ್ನು ಸಾಲಗಾರರಾದ 1). ಮೆ|| ಶ್ರೀ ಮಲ್ಲೇಶ್ವರ ಟ್ರೇಡರ್ಸ್, ಇದರ ಪ್ರತಿನಿಧಿಸುವ ಮಾಲೀಕರು: ಶ್ರೀ ಈರಪ್ಪ ಅಲಿಯಾಸ್ ಈರಣ್ಣ ಮಲ್ಲೇಶಪ್ಪ, ಹೊನಗನ್ನವರ್ ಜನರಲ್ ಮರ್ಚೆಂಟ್ಸ್ & ಕಮಿಷನ್ ಏಜೆಂಟ್ಸ್ ಪ್ಲಾಟ್ ನಂ-447/2/ಎ, ಪಂಚಾಕ್ಷರಿ ನಗರ, ಗದಗ - 582101, 2) ಶ್ರೀ ಈರಪ್ಪ ಅಲಿಯಾಸ್ ಈರಣ್ಣ ಮಲ್ಲೇಶಪ್ಪ ಹೊನಗನ್ನವರ್, ಪ್ಲಾಟ್ ನಂ-447/2/ಎ, ಪಂಚಾಕ್ಷರಿ ನಗರ, ಗದಗ - 582101 ಹಾಗೂ ಶ್ರೀ ಈರಪ್ಪ ಅಲಿಯಾಸ್ ಈರಣ್ಣ ಮಲ್ಲೇಶಪ್ಪ ಹೊನಗಣ್ಣನವರ್, ವಿಳಾಸ : #3123 ಒಕ್ಕಲಗೇರಿ ಓಣಿ, ಗದಗ, ಗದಗ - 582101, 3) ಶ್ರೀಮತಿ ಲಲಿತಾ. ಐ ಹೊನಗಣ್ಣನವರ್ ಕೋಂ ಈರಪ್ಪ ಅಲಿಯಾಸ್ ಈರಣ್ಣ, ವಿಳಾಸ : #3123, ಒಕ್ಕಲಗೇರಿ ಓಣಿ, ಗದಗ ಗದಗ -582101. ಇವರಿಂದ ಭದ್ರತಾ ಸಾಲದಾತರಿಗೆ ಬಾಕಿಯಾಗಿರುವ ರೂ. 24,71,620.74/- (ರೂಪಾಯಿ ಇಪ್ಪತ್ತ ನಾಲ್ಕು ಲಕ್ಷದ ಎಪ್ಪತ್ತೊಂದು ಸಾವಿರದ ಆರು ನೂರ ಇಪ್ಪತ್ತು ಮತ್ತು ಎಪ್ಪತ್ತ ನಾಲ್ಕು ಪೈಸೆ ಮಾತ್ರ) ದಿನಾಂಕ 05-02-2024 ರಂದು ಇದ್ದಂತೆ ಜೊತೆಗೆ ಕರಾರಿನ ದರದಂತೆ ಬಡ್ಡಿ, ಖರ್ಚು ವೆಚ್ಚ ಸೇರಿದ ಮೊತ್ತವನ್ನು ವಸೂಲು ಮಾಡಿಕೊಳ್ಳುವುದಕ್ಕಾಗಿ ಕೋಟಕ್ ಮಹೀಂದ್ರ ಬ್ಯಾಂಕ್ ಲಿಮಿಟೆಡ್(ಭದ್ರತಾ ಸಾಲದಾತರು/ಕೋಟಕ್ ಮಹೀಂದ್ರ ಬ್ಯಾಂಕ್ ಲಿಮಿಟೆಡ್) ಅಧಿಕೃತ ಅಧಿಕಾರಿಗಳು ಸಾಂಕೇತಿಕ/ಭೌತಿಕವಾಗಿ ಸ್ವಾಧೀನತೆಯನ್ನು ಪಡೆದುಕೊಂಡಿದ್ದು, ಇವುಗಳನ್ನು 'ಎಲ್ಲಿ ಹೇಗಿದೆಯೋ ಹಾಗೆಯೇ' ಮತ್ತು 'ಏನೆಲ್ಲಲ್ಲಿದೆಯೋ ಹಾಗೆಯೇ' ಆಧಾರದಲ್ಲಿ 24.05.2024 ರಂದು ಮಾರಾಟ ಮಾಡಲಾಗುತ್ತದೆ. ಸ್ಥಿರಾಸ್ತಿ/ಗಳ ವಿವರಗಳು, ಎನ್ಕಂಬರೆನ್ಸ್ ವಿವರಗಳು, ಮಾರಟದ ನಿಯಮ ಮತ್ತು ನಿಬಂಧನೆಗಳು ಕೆಳಕಂಡಂತಿವೆ:-

ಸಾಲ ಖಾತೆ ಸಂಖ್ಯೆ	ಸಾಲಗಾರರ / ಸಹಸಾಲಗಾರರ ಹೆಸರು	ತಗಾದೆ ಸೂಚನೆ ದಿನಾಂಕ ಮತ್ತು ಮೊತ್ತ (ರೂ.)	ಮೀಸಲು ಬೆಲೆ (ರೂ.)	ಇಎಂಡಿ (ಮೀಸಲು ಬೆಲೆಯ 10%) ಮತ್ತು ಕೊನೆಯ ದಿನಾಂಕ	ಪರಿವೀಕ್ಷಣೆ ದಿನಾಂಕ ಮತ್ತು ಸಮಯ	ಹರಾಜು ದಿನಾಂಕ ಮತ್ತು ಸಮಯ	ಬಾಕಿ ಮೊತ್ತ	ಎನ್‌ಕಂಬರೆನ್ ವಿವರದಲ್ಲಿದ್ದಲ್ಲಿ
1430440 39631 , 8246CL010 0000021 (CRN 32237299)	1) ಮೆ|| ಶ್ರೀ ಮಲ್ಲೇಶ್ವರ ಟ್ರೇಡರ್ಸ್ (ಸಾಲಗಾರರು) & 2) ಈರಪ್ಪ ಅಲಿಯಾಸ್ ಈರಣ್ಣ ಮಲ್ಲೇಶಪ್ಪ ಹೊನಗಣ್ಣನವರ್ 3) ಶ್ರೀಮತಿ ಲಲಿತಾ. ಐ ಹೊನಗಣ್ಣನವರ್ (ಸಹ ಸಾಲಗಾರರು)	ರೂ.21,15,576.53 (ರೂಪಾಯಿ ಇಪ್ಪತ್ತೊಂದು ಲಕ್ಷದ ಹದಿನೈದು ಸಾವಿರದ ಐದು ನೂರ ಎಪ್ಪತ್ತಾರು ಮತ್ತು ಐವತ್ತ ಮೂರು ಪೈಸೆ ಮಾತ್ರ) ದಿನಾಂಕ 29-09-2022 ರಂದು ಇದ್ದಂತೆ	ರೂ.56,08,116/- (ರೂಪಾಯಿ ಐವತ್ತಾರು ಲಕ್ಷದ ಎಂಟು ಸಾವಿರದ ನೂರ ಹದಿನಾರು ಮಾತ್ರ)	ರೂ.5,60,812/- (ರೂಪಾಯಿ ಐದು ಲಕ್ಷದ ಅರವತ್ತು ಸಾವಿರದ ಎಂಟು ನೂರ ಹನ್ನೆರಡು ಮಾತ್ರ) ದಿ : 23-05-2024 ರಂದು ಮಧ್ಯಾಹ್ನ 12:00 ಗಂಟೆಗೆ ಅಥವಾ ಮೊದಲು	14.05.2024 ಬೆಳಗ್ಗೆ 10.00 ರಿಂದ ಸಂಜೆ 4.00 ಗಂಟೆ ವರೆಗೆ	24.05.2024 ಮಧ್ಯಾಹ್ನ 03.00 ಗಂಟೆ ಯಿಂದ ಸಂಜೆ 04.00 ಗಂಟೆ ವರೆಗೆ	ರೂ.24,71,620.74/- (ರೂಪಾಯಿ ಇಪ್ಪತ್ತ ನಾಲ್ಕು ಲಕ್ಷದ ಎಪ್ಪತ್ತೊಂದು ಸಾವಿರದ ಆರು ನೂರ ಇಪ್ಪತ್ತು ಮತ್ತು ಎಪ್ಪತ್ತ ನಾಲ್ಕು ಮಾತ್ರ) ದಿನಾಂಕ 05.02.2024 ರಂದು ಇದ್ದಂತೆ	ಇಲ್ಲ
ಸ್ಥಿರಾಸ್ತಿ / ಆಸ್ತಿಗಳ ವಿವರಗಳು :	ಷೆಡ್ಯೂಲ್:- ಎಲ್ಲಾ ಭಾಗ ಮತ್ತು ವಿಭಾಗಗಳನ್ನು ಹೊಂದಿರುವ ಕೈಗಾರಿಕಾ ಆಸ್ತಿಯ ಪ್ಲಾಟ್ 4ಎ ಉಪ ವಿಭಾಗ 4ಎ/2 ರೂ.ಸಂಖ್ಯೆ 447ಎ, ಈ ಆಸ್ತಿಯು ಗದಗ್ ಬೆಟಗೇರಿ ಟಿಎಂಸಿ ವ್ಯಾಪ್ತಿಯಲ್ಲಿದೆ, ಗದಗ ರಲ್ಲಿರುವ ಇದರ ವಿಸ್ತೀರ್ಣ 2 ಗುಂಟೆಗಳು 8 ಅನ್ನಾ (2723 ಚದರ ಅಡಿ) ಈ ಆಸ್ತಿಯು ಶ್ರೀ ಈರಪ್ಪ ಮಲ್ಲೇಶಪ್ಪ ಹೊನಗೊನ್ನವರ್ ರವರ ಹೆಸರಿನಲ್ಲಿದೆ, ಎಲ್ಲಾ ಅಸ್ತಿತ್ವದಲ್ಲಿರುವ ಕಟ್ಟಡಗಳು ಮತ್ತು ಅದರ ಮೇಲೆ ರಚನೆಗಳು ಮತ್ತು ಆಯಾ ಅಡಮಾನಗಳ ದಿನಾಂಕದಿಂದ / ನಂತರ ಯಾವುದೇ ಸಮಯದಲ್ಲಿ ಅಲ್ಲಿ ನಿರ್ಮಿಸಬಹುದಾದ/ನಿರ್ಮಿಸಬಹುದು ಮತ್ತು ಅದಕ್ಕೆ ಸೇರ್ಪಡೆ ಮತ್ತು ಎಲ್ಲಾ ನೆಲೆವಸ್ತುಗಳು ಮತ್ತು ಪೀಠೋಪಕರಣಗಳು ಮತ್ತು ಪ್ಲಾಂಟ್ ಮತ್ತು ಯಂತ್ರೋಪಕರಣಗಳು ಭೂಮಿಗೆ ಶಾಶ್ವತವಾಗಿ ಜೋಡಿಸಲಾಗಿದೆ ಮತ್ತು ಪ್ರಸ್ತುತ ಮತ್ತು ಭವಿಷ್ಯದ ನಿರ್ಮಾಣ, ಆಸ್ತಿಯ ಚಕ್ಕುಬಂದಿ : ಪೂರ್ವಕ್ಕೆ : 30 ಅಡಿ ರಸ್ತೆ ಪಶ್ಚಿಮಕ್ಕೆ : 15 ಅಡಿ ರಸ್ತೆ ಉತ್ತರಕ್ಕೆ : ಪ್ಲಾಟ್ ನಂ 4ಎರ ಉಳಿದ ಭಾಗ, ದಕ್ಷಿಣಕ್ಕೆ : ಇತರೆ ಪ್ಲಾಟ್.							

ಬ್ಯಾಂಕ್‌ನ ಅನುಮೋದಿತ ಸೇವಾ ಪೂರೈಕೆದಾರರಾದ ಮೆ|| ಸಿ1 ಇಂಡಿಯಾ ಪ್ರೈವೇಟ್ ಲಿಮಿಟೆಡ್ ಮೂಲಕ ಇವರ ವೆಬ್ ಪೋರ್ಟಲ್ www.bankeauctions.com ನಲ್ಲಿ ಹರಾಜನ್ನು ಆನ್‌ಲೈನ್‌ನಲ್ಲಿ ನಡೆಸಲಾಗುತ್ತದೆ. ಯಾವುದೇ ಕಾರಣವನ್ನು ನೀಡದೆ ಯಾವುದೇ ಸಮಯದಲ್ಲಿ ಇ-ಹರಾಜನ್ನು ರದ್ದುಗೊಳಿಸಲು ಅಧಿಕೃತ ಅಧಿಕಾರಿಯವರು ಸಂಪೂರ್ಣ ಅಧಿಕಾರವನ್ನು ಹೊಂದಿರುತ್ತಾರೆ. ಆನ್‌ಲೈನ್ ಇ-ಹರಾಜು ಬಿಡ್ ಫಾರ್ಮ್, ಘೋಷಣೆ ಇತ್ಯಾದಿಗಳನ್ನು ಹೊಂದಿರುವ ಇ-ಹರಾಜು ಮಾರಾಟದ ಟೆಂಡರ್ ಡಾಕ್ಯುಮೆಂಟ್‌ನ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು www.bankeauctions.com ಮತ್ತು https://auctions.kotak.com/properties/auction-notices/ ನಲ್ಲಿ ಒದಗಿಸಲಾದ ಲಿಂಕ್ ಅನ್ನು ನೋಡಿ. ಮತ್ತು ಶ್ರೀ ಚಂದ್ರಶೇಖರ್ ಡಿ ಪಾಟೀಲ್, ಶ್ರೀಧರ್ ಬಿ ಅಥವಾ ವ್ಯಕ್ತಿಯಿಂದ ಶ್ರೀ ಕರುಣ್ ಬಿ, ಮೊಬೈಲ್- (+919980993715) (+919738413007) (+919686812683) ಇವರನ್ನು ಸಂಪರ್ಕಿಸಬಹುದು

ದಿನಾಂಕ: 25.04.2024
ಸ್ಥಳ : ಬೆಂಗಳೂರು
ಸಹಿ/- ಅಧಿಕೃತ ಅಧಿಕಾರಿಗಳು, ಕೋಟಕ್ ಮಹೀಂದ್ರ ಬ್ಯಾಂಕ್ ಲಿ.,

ಶಿವಗಣಾರಾಧನೆ

ಜನನ 01-04-1950
ನಿಧನ 22-04-2024
ಶ್ರೀ ಯಲ್ಲಪ್ಪಾ ನೀಲಪ್ಪ ಗೌರಿ (74)
ಸಂತೋಷನಗರ, ಧಾರವಾಡ.
ಇವರು ದಿನಾಂಕ: 22-04-2024 ರಂದು ತಮ್ಮ 74ನೇ ವಯಸ್ಸಿನಲ್ಲಿ ನಿಧನರಾದರು ಎಂದು ತಿಳಿಸಲು ವಿಷಾದಿಸುತ್ತೇವೆ. ತನ್ನಿಮಿತ್ತ ಮೃತರ ಶಿವಗಣಾರಾಧನೆಯನ್ನು ಶುಕ್ರವಾರ ದಿ. 26-04-2024 ರಂದು ಮಧ್ಯಾಹ್ನ 12 ಗಂಟೆಗೆ ಮೃತರ ಸ್ವಗೃಹ LIG 48, ಅನ್ನಪೂರ್ಣ ನಿವಾಸ, 2ನೇ ಕ್ರಾಸ್, ಹನುಮಂತ ದೇವರ ಗುಡಿ ಹತ್ತಿರ, ಸಂತೋಷನಗರ, ಧಾರವಾಡ ಇಲ್ಲಿ ನೆರವೇರಿಸಲಾಗುವುದು. ಕಾರಣ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ದುಃಖತಪ್ತ: ಪತ್ನಿ, ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಸೊಸೆಯಂದಿರು ಹಾಗೂ ಬಂಧು-ಬಳಗ. ಮೋ: 9844058190